**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ.,**
**ನ್ಯಾಯಾಲಯ,ಹೊಸದುರ್ಗ.**

**ಅಸಲು ದಾವಾ ಸಂಖ್ಯೆ: 133/2023** **ದಿನಾಂಕ: 12-03-2025**

**ಪಿ.ಡಬ್ಲ್ಯೂ:1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿಯ ಪರ ಶ್ರೀ ಹೆಚ್.ಎಲ್.ಎನ್. ವಕೀಲರಿಂದ**

1. ನಾನು ಈ ದಾವೆಯನ್ನು ಮನೆಯನ್ನು ಕಟ್ಟುವಾಗ ಪ್ರತಿವಾದಿ ತಕರಾರು ಮಾಡಿರುತ್ತಾರೆ ಎಂದು ದಾಖಲು ಮಾಡಿರುತ್ತೇನೆ. ನಾನು ಪ್ರಸ್ತುತ ಮನೆ ನಿರ್ಮಾಣ ಮಾಡಿ ಮುಗಿಸಿರುತ್ತೇನೆ. ನಾನು ದಾವೆಯನ್ನು ಖಾಲಿ ನಿವೇಶನಕ್ಕೆ ತೊಂದರೆ ನೀಡುತ್ತಿದ್ದರು ಎಂದು ದಾಖಲಿಸಿದ್ದೆನು. ನಾನು ಶಾಲೆಯಲ್ಲಿ ಇರುವಾಗ ಪ್ರತಿವಾದಿ ನಮ್ಮ ಸ್ವತ್ತಿನ ಬಳಿ ಬಂದು ಕಟ್ಟಡ ಕೆಲಸ ಮಾಡುತ್ತಿದ್ದವರಿಗೆ ಕೆಲಸ ಮಾಡದಂತೆ ಹೇಳಿರುತ್ತಾರೆ ಎಂದು ನನಗೆ ತಿಳಿಸಿರುತ್ತಾರೆ. ಆ ಸಮಯದಲ್ಲಿ ಪಾಯ ನಿರ್ಮಾಣ ಮಾಡಿದ್ದೆವು. ಪಾಯ ತೆಗೆಯಲು ಪ್ರತಿವಾದಿ ತೊಂದರೆ ಮಾಡುತ್ತಿದ್ದಾರೆ ಎಂದು ವಾದಪತ್ರದಲ್ಲಿ ಬರೆಸಿರುತ್ತೇನೆ. ಆ ರೀತಿ ಬರೆಸಿಲ್ಲ ಎಂದರೆ ಸರಿ.

2. ನಾನು ಮನೆ ನಿರ್ಮಿಸಿದ ದಾವಾ ಸ್ವತ್ತು ನನಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಮಾಡಿದ ದಾಖಲೆಗಳು ಸೃಷ್ಠಿ ಮಾಡಿದ ದಾಖಲೆಗಳು ಎಂದರೆ ಸರಿ. ದಾವಾ ಸ್ವತ್ತು ಮೂಲತಃ ಸರ್ವೆ ನಂ:34/ಪಿ ರಲ್ಲಿ 2 ಎಕರೆ ಇತ್ತು ಎಂದರೆ ಸಾಕ್ಷಿ ಸರ್ವೆ ನಂ: 34 ಎಂದು ಗೊತ್ತು ವಿಸ್ತೀರ್ಣ ಎಂದು ಸರಿಯಾಗಿ ಗೊತ್ತಿಲ್ಲ. ಸದರಿ ಸ್ವತ್ತು ಮೂಲತಃ ಗುಣಶೀಲಮ್ಮ ಗಂಡ ಭೂಪಾಲಪ್ಪ ಎಂಬುವರಿಗೆ ಸೇರಿದ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ. ಅದರ ಮ್ಯುಟೇಷನ್ ನಂ: 16/1960-61 ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಂತರ ಸದರಿ ಜಮೀನನ್ನು ಭೂ ಪರಿವರ್ತನೆ ಮಾಡಿಸಿರುತ್ತಾರೆ ಎಂದರೆ ನನಗೆ

ಗೊತ್ತಿಲ್ಲ. ಅದರ ಎಂ.ಆರ್.ನಂಃ 21/1985-86 ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಂತರ ಅವುಗಳನ್ನು ಗುಣಶೀಲಮ್ಮ ನಿವೇನಗಳನ್ನಾಗಿ ಪರಿವರ್ತನೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ನಿವೇಶನ ಆಗಿರುವ ಬಗ್ಗೆ ಮಾತ್ರ ತಿಳಿದಿದೆ ಎಂದು ನುಡಿದಿರುತ್ತಾರೆ. ಸದರಿ ನಿವೇಶನಗಳು ಹೊಸದುರ್ಗ ಟೌನ್ ಮುನಿಸಿಪಾಲಿಟಿ ವ್ಯಾಪ್ತಿಯ ಎನ್.ಇ.ಎಸ್. ಬಡಾವಣೆಗೆ ಸೇರಿದ್ದು ಎಂದರೆ ಸರಿ. ಅದಕ್ಕೆ ಮಹಾವೀರ ಲೇಔಟ್, ಅಜ್ಜಂಪುರ ರಸ್ತೆ ಎಂದು ಹೆಸರು ಇರುತ್ತದೆ ಎಂದರೆ ಸರಿಯಲ್ಲ.

3. 2 ಎಕರೆ ಜಮೀನಿನಲ್ಲಿ 5 ನಿವೇಶನಗಳು ಗುಣಶೀಲಮ್ಮ ಹೆಸರಿನಲ್ಲಿ ಇದ್ದವು ಎಂದರೆ ನನಗೆ ಗೊತ್ತಿಲ್ಲ. ಸದರಿ ಸೈಟುಗಳ ನಂಬರ್ ಮುನಿಸಿಪಾಲಿಟಿ ಅಸೆಸ್ಮೆಂಟ್ ನಂಃ 9435/65-30x16 ಅಡಿ, 9436/65 ಬಿ-35x36 ಅಡಿ, 9437/65 ಸಿ-30x20 ಅಡಿ, 9438/65 ಡಿ-35x20 ಅಡಿ, 9439/65 ಇ-35x20 ಅಡಿ ಎಂದರೆ ನನಗೆ ಗೊತ್ತಿಲ್ಲ. ನಾನು ದಾಖಲೆಗಳನ್ನು ಮುನಿಸಿಪಾಲಿಟಿಯ ಸದಸ್ಯರಾದ ಓಬಳಮ್ಮ ಕೋಂ ಭೈರಪ್ಪ ರವರೊಡನೆ ಷರಿಕ್ಕಾಗಿ ಅವರ ಹೇಳಿಕೆ ಮೇಲೆ ಸೃಷ್ಠಿ ಮಾಡಿಕೊಂಡಿರುತ್ತೇನೆ ಎಂದರೆ ಸುಳ್ಳು. ನಾನು ಸದರಿ ಸುಳ್ಳು ದಾಖಲೆಗಳ ಆಧಾರದ ಮೇರೆಗೆ ಆರ್.ಸಿ.ಸಿ ಮನೆ ಕಟ್ಟಿರುತ್ತೇನೆ ಎಂದರೆ ಸರಿಯಲ್ಲ.

4. ಗುಣಶೀಲಮ್ಮರವರು ತನ್ನ ನಿವೇಶಗಳಲ್ಲಿ ನಾನು ಮನೆ ಕಟ್ಟುತ್ತಿದ್ದೇನೆ ಎಂದು ಪೊಲೀಸ್ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ಮತ್ತು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಮುನಿಸಿಪಾಲಿಟಿಯವರು ನನನ ಹೆಸರಿಗೆ ತಪ್ಪಾಗಿ ಖಾತಾ ಬದಲಾವಣೆ ಮಾಡಿಕೊಟ್ಟಿರುತ್ತಾರೆ ಎಂದರೆ ಸುಳ್ಳು. ದಾವಾ ಸ್ವತ್ತನ್ನು ಗುಣಶೀಲಮ್ಮರವರು ತನ್ನ ಸಂಬಂಧಿಕರಾದ ಪ್ರತಿವಾದಿಗೆ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನನಗೂ, ದಾವಾ ಆಸ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ

ಸರಿಯಲ್ಲ. ನಾನು ದಾವೆಯಲ್ಲಿ ಕೋರಿರುವಂತೆ ಪರಿಹಾರ ನೀಡಲು ಸಾಧ್ಯವಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯ ವಿರುದ್ಧ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ.

(ಪ್ರಸನ್ನ ಕುಮಾರ್ ಸಿ)
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.**